ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.

ಸಿಸಿ ನಂಃ **72/2024**

| | | |
|---|---|---|
| ಹೆಸರು | ಗಿರೀಶ್ | ಸಿ.ಡಬ್ಲ್ಯೂ **- 4** |
| ತಂದೆಯ ಹೆಸರು | ಲೇಟ್ ಶ್ರೀನಿವಾಸ | ಪಿ.ಡಬ್ಲ್ಯೂ **- 4** |
| ವಯಸ್ಸು | 30 ವರ್ಷ | |
| ಉದ್ಯೋಗ | ಮೆಡಿಸನ್ ಸೇಲ್ಸ್ | |
| ವಾಸ ಸ್ಥಳ | ಬಾನಗನಹಳ್ಳಿ | |

ಸಾಕ್ಷಿಗೆ ದಿನಾಂಕಃ 06.03.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಎ ಪಿ ಪಿ ರರಿಂದ ಃ

ನನಗೆ ಚಾಸಾ 1 ರಿಂದ 3, 5 ರಿಂದ 12 ರವರ ಪರಿಚಯವಿದೆ. ಮೃತ ವಿನೋದ್ ಕುಮಾರ್ ರವರು ನನ್ನ ಸ್ನೇಹಿತ. ದಿ: 14.05.2024 ರಂದು ನಾನು ಬೆಂಗಳೂರಿನಲ್ಲಿ ಇರುವಾಗ ಚಾಸಾ 2 ರವರು ನನಗೆ ದೂರವಾಣಿ ಕರೆ ಮಾಡಿ, ವಿನೋದ್ ಮತ್ತು ತಾನು ಪಲ್ಸರ್ ಬೈಕ್‌ನಲ್ಲಿ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿರುವಾಗ ಸದರಿ ಬೈಕ್‌ನ್ನು ವಿನೋದ್ ಕುಮಾರ್ ರವರು ಚಾಲನೆ ಮಾಡುತ್ತಿದ್ದಾಗ ಗೌಡಗೆರೆಯ ಬಳಿ ಅಪಘಾತವಾಗಿದೆ ಎಂದು ಮಳವಳ್ಳಿ ಆಸ್ಪತ್ರೆಗೆ ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ವಿನೋದ್ ಕುಮಾರ್ ರವರ ತಂದೆಗೆ ತಿಳಿಸುವಂತೆ ಚಾಸಾ 2 ರವರು ನನಗೆ ಹೇಳಿರುತ್ತಾರೆ. ನನ್ನ ಬಳಿ ವಿನೋದ್ ಕುಮಾರ್ ರವರ ತಂದೆಯ ದೂರವಾಣಿ ಸಂಖ್ಯೆ ಇಲ್ಲದ ಕಾರಣ ಚಾಸಾ 5 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ಸದರಿಯವರು ವಿನೋದ್ ಕುಮಾರ್ ರವರ ತಂದೆಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಮತ್ತೆ ಕರೆ ಮಾಡಿ, ಮಂಡ್ಯ ಆಸ್ಪತ್ರೆಗೆ ಹೋಗುತ್ತಿರುವುದಾಗಿ ತಿಳಿಸಿರುತ್ತಾರೆ. ನಾನು ಮತ್ತು ಚಾಸಾ 5 ರವರು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇವೆ. ನಾವು ಆಸ್ಪತ್ರೆಗೆ ಹೋದಾಗ ಚಾಸಾ 1 ಮತ್ತು 6 ರವರು ಆಸ್ಪತ್ರೆಯಲ್ಲಿ ಇದ್ದರು. ನಾನು ಗಾಯಾಳುವನ್ನು ನೋಡಿದಾಗ ಅವರ ತಲೆ ಮತ್ತು ಮುಂಗೈಗೆ ಪೆಟ್ಟಾಗಿತ್ತು. ಚಾಸಾ 2 ರವರನ್ನು ಅಪಘಾತದ ಬಗ್ಗೆ ವಿಚಾರಿಸಲಾಗಿ ಹಾಲಿನ ಟ್ರಕ್ ವೇಗವಾಗಿ ಬಂದು ಬೈಕ್‌ಗೆ ಡಿಕ್ಕಿ ಪಡಿಸಿರುತ್ತದೆ ಎಂದು ತಿಳಿಸಿರುತ್ತಾರೆ.

2. ಮೈಸೂರಿನ ಸ್ಪಂದನಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ವಿನೋದ್ ಕುಮಾರ್ ರವರು ಮೃತರಾಗಿರುತ್ತಾರೆ. ಚಾಸಾ 1 ರವರು ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ನಾನು ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು ಃಆರೋಪಿ ಪರ: ಶ್ರೀ ಬಿ.ಯು. ವಕೀಲರಿಂದ</u>

ಚಾಸಾ 2 ಮತ್ತು 5 ರವರ ದೂರವಾಣಿ ಸಂಖ್ಯೆಯನ್ನು ಹೇಳಿಕೆಯಲ್ಲಿ ಹೇಳಿರುವುದಿಲ್ಲ. ವಿನೋದ್ ಕುಮಾರ್ ರವರಿಗೆ ಡಿ.ಎಲ್. ಇದ್ದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಹಾಲಿನ ಟ್ರಕ್ ರಸ್ತೆಯ ಎಡಬದಿಯಲ್ಲಿ ನಿಂತಿದ್ದಾಗ ವಿನೋದ್ ಕುಮಾರ್ ರವರ ನಿರ್ಲಕ್ಷ್ಯತನದಿಂದ ಬೈಕ್‌ನ್ನು ಚಾಲನೆ ಮಾಡಿದ ಕಾರಣ ಆತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ವಿನೋದ್ ಕುಮಾರ್ ರವರಿಗೆ ಡಿ.ಎಲ್. ಇರಲಿಲ್ಲ ಮತ್ತು ಅವರು ಹೆಲ್ಮೆಟ್ ಧರಿಸದೇ ಚಾಲನೆ ಮಾಡಿದ ಕಾರಣ ಅವರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಚಾಸಾ 2 ರವರು ನನಗೆ ಕರೆ ಮಾಡಿ, ಅಪಘಾತದ ಬಗ್ಗೆ ತಿಳಿಸಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವ ವಾಹನದಲ್ಲಿ ನಾವು ಆಸ್ಪತ್ರೆಗೆ ಯಾರು ಯಾರು ಬಂದಿರುತ್ತೇವೆ ಎಂದು ಹೇಳಿಕೆಯಲ್ಲಿ ಹೇಳಿರುತ್ತೇನೆ. ನಾವು ಮಳವಳ್ಳಿಯ ಆಸ್ಪತ್ರೆಗೆ ಬಂದಿಲ್ಲ ಮತ್ತು ಹೇಳಿಕೆಯಲ್ಲಿ ಆ ಬಗ್ಗೆ ಹೇಳಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ನನ್ನ ಸ್ನೇಹಿತನ ಕುಟುಂಬಕ್ಕೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.